ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

'MUNJAVU' Kannada Weekly. KOPPA - CHM ಫೋನ್: 114

5ನೇ ವರ್ಷ 30ನೇ ಸಂಚಿಕೆ ಕೊಪ್ಪ 19-4-1987 ಭಾನುವಾರ ಬೆಲೆ 50 ಪೈಸೆ

"ದಲಿತರನ್ನೂ 'ಮನುಷ್ಯ'ರಂತೆ ಕಾಣಿ, ಸಾಕು"

(ವರದಿ : ಕಲ್ಕುಳಿ ವಿಠಲ ಹೆಗ್ಡೆ)

ಶೃಂಗೇರಿ "ನನ್ನನ್ನೂ ಕೇವಲ ನಿಮ್ಮಂತೆಯೇ ಮನುಷ್ಯರಾಗಿ ಕಾಣಿರಿ, ಅಷ್ಟೇ ಸಾಕು" ಎಂದು ಶೃಂಗೇರಿ ತಾ॥ ದಲಿತ ಸಂಘರ್ಷ ಸಮಿತಿ ಸಂಚಾಲಕ ಕೆ. ಎಂ. ಗೋಪಾಲ್ ಅಂಬೇಡ್ಕರ್ ಜಯಂತಿಯ ಸಾರ್ವಜನಿಕ ಸಭೆಯಲ್ಲಿ ಮಾರ್ಮಿಕವಾಗಿ ನುಡಿದರು.

ಅಂಬೇಡ್ಕರ್‌ರವರ ಜೀವನ ಚರಿತ್ರೆ, ಅವರ ಸಾಧನೆಯ ಹಾದಿ, ಗಾಂಧೀಜಿಯವರೊಂದಿಗಿದ್ದ ಭಿನ್ನಾಭಿಪ್ರಾಯ, ದಲಿತರ ಮೂಲಭೂತ ಸಾಮಾಜಿಕ ಸ್ವಾತಂತ್ರ್ಯದ ವಿಚಾರದಲ್ಲಿ ಗಾಂಧೀಜಿ ಎಸಗಿದ ತಾರತಮ್ಯ, ಎಷ್ಟೋ ವಿಧದಲ್ಲಿ ಮನವರಿಕೆ ಮಾಡಿದರೂ ಸಹ ಅಸ್ಪೃಶ್ಯರು ಕಡೇಪಕ್ಷ ಮನುಷ್ಯರಂತಾದರೂ ಬದುಕುವುದನ್ನು ಒಪ್ಪಲು ಸಿದ್ಧರಾಗದ ಸವರ್ಣೀಯ ಹಿಂದೂಗಳ ರೋಗ ಪೀಡಿತ ಮನೋಭಾವಕ್ಕೆ ರೋಸಿ ಅಂಬೇಡ್ಕರ್‌ರವರು "ನಾನು ಹಿಂದುವಾಗಿ ಹುಟ್ಟಿದ್ದರೂ ಹಿಂದುವಾಗಿಯೇ ಸಾಯುವುದಕ್ಕೆ ಒಪ್ಪಲಾರೆ" ಎಂದು ಬೌದ್ಧ ಧರ್ಮ ಸ್ವೀಕರಿಸಿದ್ದು–ಮುಂತಾದ ವಿಚಾರಗಳ ಬಗ್ಗೆ ಗೋಪಾಲ್ ವಿವರಿಸಿದರು.

ಜಾತಿ ವ್ಯವಸ್ಥೆಗೆ ಭದ್ರ ಅಡಿಪಾಯ ಹಾಕಿ ಮನುಷ್ಯ-ಮನುಷ್ಯರ ಭೇದ ಭಾವ ಸೃಷ್ಟಿಗೆ ಕಾರಣನಾದ ಮನುವಿಗೂ, ಇಂಥ ಅಮಾನುಷವಾದ ಅಸಮಾನತೆಯನ್ನು ತೊಡೆದು ಇಡೀ ದೇಶದ ಎಲ್ಲರೂ ಸಮಾನತೆ, ಸೌಹಾರ್ದದಿಂದ ಬಾಳುವಂಥ ಸಮಾಜ ನಿರ್ಮಾಣಕ್ಕೆ ತಮ್ಮ ಜೀವನವನ್ನೇ ಸವೆಸಿದ ಅಂಬೇಡ್ಕರ್‌ರಿಗೂ ಹೋಲಿಕೆ ಮಾಡುವವರನ್ನು ಗೋಪಾಲ್ ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.

ದಕ್ಷಿಣ ಆಫ್ರಿಕಾದ ವರ್ಣಭೇದದ ಬಗ್ಗೆ "ಹೇಯ, ಅಮಾನವೀಯ" ಎಂದು ಭಾಷಣ ಬಿಗಿಯುವ ರಾಜೀವ್‌ಗಾಂಧಿಗಾಗಲಿ, ಮೀಸಲಾತಿಯ ಉಪಯೋಗ ಪಡೆದ ಶಾಸಕರಿಗಾಗಲಿ ತಮ್ಮದೇ ಜನರ ಬಗ್ಗೆ ಕಾಳಜಿಯಿಲ್ಲ. ಹರಿಜನರ ಮತಾಂತರವನ್ನು ಆಕ್ಷೇಪಿಸುವ ಮಠಾಧೀಶರು, ಧಾರ್ಮಿಕ ಮುಂದಾಳುಗಳು ಬೆತ್ತಲೆ ಸೇವೆ, ದೇವದಾಸಿ, 'ಓಕುಳಿ'ಯಾಟಗಳಿಗೆ ಸಹಕರಿಸುತ್ತಾರೆ. ನಮ್ಮ ಸರ್ಕಾರ ಅಂಬೇಡ್ಕರ್ ಜಯಂತಿ ಮಾಡಿ ದಲಿತರ ಬಗ್ಗೆ ತನ್ನ ಅಪ್ರಾಮಾಣಿಕ ಕಾಳಜಿಯನ್ನು ವ್ಯಕ್ತಪಡಿಸಿದೆ. ಇದೆಲ್ಲಕ್ಕಿಂತ ನಮ್ಮನ್ನು ಕೇವಲ ನಿಮ್ಮಂತೆಯೇ, ಮನುಷ್ಯರಾಗಿ ಕಾಣುವುದನ್ನು ಕಲಿತರೆ ಅಷ್ಟೇ ಸಾಕು ಎಂದು ಗೋಪಾಲ್ ತೀವ್ರ ವಿಷಾದದಿಂದ ಹೇಳಿದರು.

ಹೇರೂರು ಅನಂತ ಭಟ್ ಮಾತನಾಡಿ, ನಮ್ಮನ್ನು ಯಾರೂ ಉದ್ಧಾರ ಮಾಡಲಾರರು. ನಾವು ಮುಂದೆ ಬರಬೇಕೆಂಬ ಛಲ ನಮ್ಮಲ್ಲಿರಬೇಕು ಇದನ್ನು ನಾವು ಅಂಬೇಡ್ಕರ್‌ರಿಂದ ಕಲಿಯಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಅಣ್ಣಯ್ಯ ಹೆಗ್ಡೆಯವರು "ಗೋಪಾಲ್‌ರವರ ಮಾತಿನಲ್ಲಿರುವ ಅವರ ನೋವಿನ ಆಳವನ್ನು ನಾವು ಅರ್ಥ ಮಾಡಿಕೊಳ್ಳಬೇಕಿದೆ ನಾನು ಇನ್ನು ಮುಂದೆ ನಮ್ಮ ಕಚೇರಿಯಲ್ಲಾಗಲಿ, ನನ್ನ ಮನೆಯಲ್ಲಾಗಲಿ ದಲಿತರನ್ನು ಎಲ್ಲರಂತೆ ಗೌರವಿಸುತ್ತೇನೆ" ಎಂದು ಘೋಷಿಸಿ, ಎಲ್ಲರೂ ಇದೇ ರೀತಿ ಪಾಲಿಸುವಂತೆ ಕರೆ ನೀಡಿದರು.

ಸರ್ಕಾರದ ವತಿಯಿಂದ ಏರ್ಪಾಡಾಗಿದ್ದ ಈ ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಪ್ರಭಾಕರ ಶರ್ಮ ಸ್ವಾಗತಿಸಿ ವಂದಿಸಿದರು.

ಹುಲಿ ಕಾಟ

ಶಾಂತಿಗ್ರಾಮ: ಇಲ್ಲಿಗೆ ಸಮೀಪದ ಕಲ್ಲು ಗುಡ್ಡೆ ಮತ್ತು ಸುತ್ತಮುತ್ತಲ ಹಳ್ಳಿಗಳಲ್ಲಿ ಹುಲಿಕಾಟ ಜಾಸ್ತಿಯಾಗಿದ್ದು, ರೈತರ ಅನೇಕ ಹಸು–ಎತ್ತುಗಳು ಈಗಾಗಲೇ ಹುಲಿಯ ಬಾಯಿಗೆ ತುತ್ತಾಗಿವೆ. ಈಚೆಗೆ ಕವಿಲು ಹೊಳೆ ಶಂಕರಯ್ಯ ಎಂಬವರ ಎತ್ತು, ಬಿಳಾಲ್‌ಕೊಪ್ಪದ ಸಿಂಗ ಎಂಬವರ ಹಸು ಈ ಹುಲಿಯ ಪಾಲಾಗಿವೆ. ಅರಣ್ಯ ಇಲಾಖೆಯವರು ಹುಲಿಯ ನಿಯಂತ್ರಣ ಮಾಡಬೇಕೆಂದು ರೈತರು ಆಗ್ರಹಿಸಿದ್ದಾರೆ.

(ವರದಿ : ಎಂ. ವಿ. ಗಂಗಾಧರ್)

ನಕಲಿ ಬಿತ್ತನೆ ಬೀಜ : ರೈತರಿಗೆ ಮುನ್ನೆಚ್ಚರಿಕೆ

ಚಿಕ್ಕಮಗಳೂರು: ನೆರೆಯ ರಾಜ್ಯಗಳಿಂದ ಕೆಲವರು ಅಧಿಕ ಇಳುವರಿ ಮತ್ತು ಶಕ್ತಿವಾನ್ ಬಿತ್ತನೆ ಬೀಜಗಳೆಂಬ ನೆಪದಲ್ಲಿ ನಕಲಿ ಬಿತ್ತನೆ ಬೀಜಗಳನ್ನು ಕಳ್ಳತನದಿಂದ ತಂದು ರಸೀದಿ ಕೊಡದೆ ಕಡಿಮೆ ಬೆಲೆಗೆ ಅನಧಿಕೃತವಾಗಿ ಮಾರಾಟ ಮಾಡುವ ಸಾಧ್ಯತೆಯಿದೆ ರೈತ ಬಾಂಧವರು ಮುಂಜಾಗ್ರತೆ ವಹಿಸಿ ಈ ತರಹದ ಬೀಜಗಳನ್ನು ಕೊಂಡುಕೊಳ್ಳಬಾರದು. ಇಂತಹ ಅನಧಿಕೃತ ಮಾರಾಟಗಾರರ ಬಗ್ಗೆ ಕೃಷಿ ಇಲಾಖೆಯವರ ಗಮನಕ್ಕೆ ತಂದಲ್ಲಿ ತಪ್ಪಿತಸ್ಥರ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುವುದು ಎಂದು ಹಾಸನ ವಿಭಾಗದ ಜಂಟಿ ಕೃಷಿ ನಿರ್ದೇಶಕರಾದ ಎಂ.ಕೆ. ಗಣೇಶ ಪೈ ರೈತರಲ್ಲಿ ಮನವಿ ಮಾಡಿದ್ದಾರೆ.

ಬಿತ್ತನೆ ಬೀಜ ಪೂರೈಸಲು ಕರ್ನಾಟಕ ರಾಜ್ಯ ಬೀಜ ನಿಗಮದವರು ಏಕೈಕ ಮಾರಾಟಗಾರರಾಗಿದ್ದಾರೆ. ಈ ನಿಗಮದ ಮಾರಾಟ ಮಳಿಗೆಗಳಿಂದ ಮಾತ್ರ ಬಿತ್ತನೆ ಬೀಜ ಖರೀದಿಸಬೇಕು. ಪ್ರತಿ ಚೀಲದ ಮೇಲೂ ಆಯಾ ಬಿತ್ತನೆ ತಳಿಯ ಹೆಸರು, ಮೊಳಕೆ ಪ್ರಮಾಣ, ಯಾವ ವರ್ಷದ್ದು ಎಂಬುದನ್ನು ನಮೂದಿಸಿದೆಯೇ ಎಂಬುದನ್ನು ಖಾತ್ರಿಪಡಿಸಿದ ನಂತರ ಖರೀದಿಸಬೇಕೆಂದು ತಿಳಿಸಿದ್ದಾರೆ.

ಅಸಗೋಡು ದ್ವಾಕ್ರಾ ಘಟಕ ಕಟ್ಟಡಕ್ಕೆ ಶಂಕುಸ್ಥಾಪನೆ; ಪ್ರಯೋಜನದಾರರಿಗೆ ಲಾಭಾಂಶ ಹಂಚಿಕೆ

ಅಸಗೋಡು: ಇಲ್ಲಿನ ಭಾರತೀ ಮಹಿಳಾ ಸಮಾಜದ ಆಶ್ರಯದಲ್ಲಿ, ದ್ವಾಕ್ರಾ ಯೋಜನೆಯಡಿ ಒಂದೂವರೆ ವರ್ಷದ ಹಿಂದೆ ಆರಂಭವಾದ ಶ್ರೀಶಕ್ತಿ ಶಿಶು ಆಹಾರ ಉತ್ಪಾದನಾ ಕೇಂದ್ರದ ಕಟ್ಟಡಕ್ಕೆ ಜಿಲ್ಲಾ ಪರಿಷತ್ ಅಧ್ಯಕ್ಷ ಕೆ ಎಂ ಕೃಷ್ಣಮೂರ್ತಿ ಏ. 12ರಂದು ಶಂಕುಸ್ಥಾಪನೆ ಮಾಡಿದರು. ಶಾಸಕ ಗೋವಿಂದಗೌಡರು ಅಧ್ಯಕ್ಷತೆ ವಹಿಸಿದ್ದು, ಕಚ್ಚೋಡಿ ಶ್ರೀನಿವಾಸ್, ಪಿ ಬಾಲಪ್ಪ ಮತ್ತು ಕರ್ನಾಟಕ ಬ್ಯಾಂಕಿನ ಎಂ.ಎಸ್. ಕೃಷ್ಣಭಟ್ ಮುಖ್ಯ ಅತಿಥಿಗಳಾಗಿದ್ದರು.

ಇದೇ ಸಂದರ್ಭದಲ್ಲಿ, ಈ ದ್ವಾಕ್ರಾ ಘಟಕದ ವಹಿವಾಟಿನ ಆಡಿಟ್ ಆದ ಲೆಕ್ಕಪತ್ರಗಳ ಆಧಾರದಲ್ಲಿ ಈವರೆಗಿನ ಲಾಭಾಂಶವನ್ನು ಘಟಕದ ಪ್ರಯೋಜನದಾರರಿಗೆ ಹಂಚಲಾಯಿತು. ಒಟ್ಟು 22 ಮಂದಿಯ ಪೈಕಿ ಕೇವಲ 55 ದಿನ ಮಾತ್ರ ಕೆಲಸ ಮಾಡಿದ್ದ ಒಬ್ಬರ ಹೊರತು ಉಳಿದೆಲ್ಲರಿಗೂ ಅವರವರು ದುಡಿದ ಆಧಾರದಲ್ಲಿ 1500 ರೂ ಗಳಿಂದ 7500ರೂ.ಗಳವರೆಗೂ ಲಾಭಾಂಶ ದೊರೆತಿದೆ. ಇಷ್ಟೇ ಹಣವನ್ನು ಘಟಕದ ಮುಂದಿನ ವಹಿವಾಟಿಗಾಗಿ ಉಳಿಸಿಕೊಳ್ಳಲಾಗಿದೆಯಲ್ಲದೆ, ಅವರೆಲ್ಲ ಪಡೆದಿದ್ದ ತಲಾ 5000 ರೂ.ಗಳ ಸಾಲವನ್ನು ಸಹ ಬಡ್ಡಿ ಸಮೇತ ತೀರಿಸಲಾಗಿದೆ. ಇದೆಲ್ಲವೂ ಪ್ರಯೋಜನದಾರರು ತಮ್ಮ ಪ್ರತಿ ದಿನದ ದುಡಿಮೆಗೆ 8ರೂ. ಕೂಲಿ ಪಡೆದೂ ಉಳಿದ ಹಣವಾಗಿದೆ.

ಘಟಕಕ್ಕೆ ಸಾಲ ಒದಗಿಸಿದ ಕರ್ನಾಟಕ ಬ್ಯಾಂಕಿಗೆ ಘಟಕದವರು ನೀಡಿದ ನೆನಪಿನ ಕಾಣಿಕೆಯನ್ನು ಬ್ಯಾಂಕಿನ ಆಡಳಿತ ವರ್ಗದ ಪರವಾಗಿ ಎಂ. ಎಸ್. ಕೃಷ್ಣಭಟ್ ಸ್ವೀಕರಿಸಿದರು. ಘಟಕಕ್ಕೆ ಆರಂಭದಿಂದ ಈವರೆಗೂ ಮಾರ್ಗದರ್ಶಕರಾಗಿ, ಪ್ರೇರಕರಾಗಿ ನೆರವಾದ ಜಯಲಕ್ಷ್ಮಿ ಮಾ ಸಪ್ಪಗೌಡ ಅವರಿಗೆ ಫಲಾನುಭವಿಗಳು ಮಾಲಾರ್ಪಣೆ ಮಾಡಿ ಕೃತಜ್ಞತೆ ಸಲ್ಲಿಸಿದರು.

ಈ ಕಟ್ಟಡಕ್ಕೆ ಸರ್ಕಾರದಿಂದ 1ಲಕ್ಷ 5 ಸಾವಿರ ರೂ. ಮಂಜೂರಾಗಿದೆ. ರಾಜ್ಯದಲ್ಲಿ ದ್ವಾಕ್ರಾ ಯೋಜನೆ ಜಾರಿಯಲ್ಲಿರುವ ಬಿಜಾಪುರ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಪೈಕಿ, ಪ್ರಯೋಜನದಾರರಿಗೆ ನಿಜವಾಗಿಯೂ ಪ್ರಯೋಜನಕರವಾಗಿ ಹಾಗೂ ಸ್ವತಂತ್ರವಾಗಿ ಕೂಡ ನಡೆಯುತ್ತಿರುವ ಘಟಕಗಳಲ್ಲಿ ಇದು 2ನೆಯದೆನ್ನಲಾಗಿದೆ.

ವಾರಾಂತ್ಯ ಕ್ರೀಡಾ ತರಬೇತಿ

ಕೊಪ್ಪ : ಕ್ರೀಡಾ ಪ್ರಾಧಿಕಾರ ಹಾಗೂ ಜಿಲ್ಲಾ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಗಳ ಆಶ್ರಯದಲ್ಲಿ ಏ 25 ಮತ್ತು 26ರಂದು ಕೊಪ್ಪ ತಾಲ್ಲೂಕಿನ 8 ರಿಂದ 15 ವರ್ಷದೊಳಗಿನ ಬಾಲಕ–ಬಾಲಕಿಯರಿಗೆ ಉಚಿತವಾಗಿ ಅಥ್ಲೆಟಿಕ್ಸ್ ಮತ್ತು ವಾಲಿಬಾಲ್ ತರಬೇತಿ ಏರ್ಪಡಿಸಿದೆ ಭಾಗವಹಿಸಿದವರಿಗೆ ಪ್ರಶಸ್ತಿ ನೀಡಲಾಗುವುದು. ಉತ್ತಮ ಕ್ರೀಡಾಪಟುಗಳನ್ನು ಗುರ್ತಿಸಿ ಅವರಿಗೆ ಹೆಚ್ಚಿನ ತರಬೇತಿಗೆ ಅನುಕೂಲ ಕಲ್ಪಿಸಿಕೊಡಲಾಗುವುದು.

ಧಾರ್ಮಿಕ ಪ್ರವಚನ

ಮೇಗೂರು: ಇಲ್ಲಿಯ ಶ್ರೀ ಲಕ್ಷ್ಮೀ ವೆಂಕಟರಮಣ ದೇವಸ್ಥಾನದಲ್ಲಿ ರಾಮೋತ್ಸವದ ಅಂಗವಾಗಿ ಗುಡ್ಡೇತೋಟ ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಬಸವಾನಿ ರಾಮಶರ್ಮರಿಂದ ಧಾರ್ಮಿಕ ಪ್ರವಚನ ನಡೆಯಿತು.

ಸ್ಥಳೀಯ ಭಗಿನೀ ಮಹಿಳಾ ಸಮಾಜ ಮತ್ತು ರಂಜನಿ ಯುವಕ ಸಂಘದವರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಸಾಗರ ಅಡಿಕೆ ತಾ॥ 16.4.87

ಇಡಿ ಅಡಿಕೆ ರೂ. 1726–1911

ಆಪಿ ರೂ. 3250–3779

ಚಾಲಿ 1300–1516

ಸಿಪ್ಪೆ ಗೋಟು ರೂ. 589–709

ಮೆಣಸು ರೂ. 4762–4859

ವಿಷಾದ

ನಮ್ಮ 5.4.87ರ ಸಂಚಿಕೆಯ "ಕಳಪೆ ಮಾಲು ವಶ" ಶೀರ್ಷಿಕೆಯ ಸುದ್ದಿಯಲ್ಲಿ ವೆಂಕಟೇಶ್ ಎಂಬುದರ ಬದಲು ಚಂದ್ರ ಎಂದು ಪ್ರಮಾದ ವಶಾತ್ ತಪ್ಪಾಗಿ ಪ್ರಕಟವಾಗಿರುವುದಕ್ಕೆ ವಿಷಾದಿಸುತ್ತೇವೆ. —ಸಂ.

ಓದುಗರ ಪತ್ರ

ಲೋಡ್ ಅತಿಯಾದಾಗ ವಿದ್ಯುತ್ ನಿಲುಗಡೆ

ಮಾನ್ಯರೇ,

ಬಾಳೆಹೊನ್ನೂರು ಉಪ ವಿಭಾಗದಲ್ಲಿ ನೀರಾವರಿ ಪಂಪ್ ಸೆಟ್‌ಗಳು ಮತ್ತು ಗ್ರಾಮಾಂತರ ವಿದ್ಯುದೀಕರಣಗಳ ಸಂಖ್ಯೆ ಹೆಚ್ಚಾಗಿದ್ದು, ಈಗ ಬೇಸಿಗೆಯಲ್ಲಿ ಇವು ಉಪಯೋಗಿಸುವ ವಿದ್ಯುತ್ ಪ್ರಮಾಣವು ಅಧಿಕವಾಗಿರುವುದರಿಂದ ಬಾಳೆಹೊನ್ನೂರಿನ ವಿದ್ಯುತ್ ವಿತರಣಾಕೇಂದ್ರದ ಪರಿವರ್ತಕಗಳ ಮೇಲೆ ಒತ್ತಡ ಹೆಚ್ಚಾಗುತ್ತಿದೆ. ಹೀಗಾದಾಗ ಲೋಡನ್ನು ಸರಿದೂಗಿಸಲು **ಮಾಗುಂಡಿ, ಬಾಳೆಹೊನ್ನೂರು, ಜಯಪುರ** ಮತ್ತು **ಆಲ್ದೂರು** ಫೀಡರುಗಳನ್ನು ಅನಿವಾರ್ಯವಾಗಿ ವಿದ್ಯುತ್‌ನಿಂದ ನಿಲುಗಡೆ ಮಾಡಲಾಗುತ್ತಿದೆ. ಇದರಿಂದ ಸಾರ್ವಜನಿಕರಿಗಾಗುವ ತೊಂದರೆಯ ಬಗ್ಗೆ ವಿಷಾದಿಸುತ್ತಾ, ಸಾರ್ವಜನಿಕರ ಸಹಕಾರ ಕೋರುತ್ತೇವೆ.

—ಸ। ಕಾ। ಇಂಜಿನಿಯರ್,
ಕ.ವಿ. ಮಂಡಳಿ, ಬಾಳೆಹೊನ್ನೂರು

ಸೇತುವೆ ನಿರ್ಮಿಸಲು ಮನವಿ

ಬೇಗಾರು: ಇಲ್ಲಿಗೆ ಸಮೀಪದ ಆಸನಬಾಳು ಗ್ರಾಮದ ಹರೇಗುಪ್ಪ ಹಳ್ಳದ ಸೇತುವೆ ಮುರಿದು ಬಿದ್ದು, ಸುಮಾರು 10 ವರ್ಷದ ಮೇಲಾಗಿದ್ದು, ಬೇರೆ ಸೇತುವೆ ಮಂಜೂರಾಗಿರುವುದಾಗಿ ಅಧಿಕಾರಿಗಳು ಹೇಳುತ್ತಿದ್ದಾರಾದರೂ ಇನ್ನೂ ಸೇತುವೆ ಆಗಿಲ್ಲ. ಈ ಹಳ್ಳದಾಚೆಗೆ 60–70 ಮನೆಗಳಿದ್ದು, ಅಲ್ಲಿಂದ ಮುಂದೆ ತಾರೊಳ್ಳಿಕೊಡಿಗೆ ಗಿರಿಜನ ಹಳ್ಳಿಗೆ ಹೋಗುತ್ತದೆ. ಮಳೆಗಾಲದಲ್ಲಿ ಕಾಯಿಲೆಯವರಿಗೆ, ಶಾಲಾ ಮಕ್ಕಳಿಗೆ ಅಸಾಧ್ಯ ತೊಂದರೆಯಾಗಿದೆ. ಬೇಗಾರಿನವರಿಗೂ ಗೋವಿಂದಗೌಡರಿಗೂ ಸಲ್ಲಿಸಿದ ಅರ್ಜಿ–ಮನವಿಗಳೂ ಫಲ ಕೊಟ್ಟಿಲ್ಲ ಎಂದಿರುವ ಗ್ರಾಮಸ್ಥರು ಶೀಘ್ರ ಹೊಸ ಸೇತುವೆಗೆ ಒತ್ತಾಯಿಸಿದ್ದಾರೆ.

ಶೃಂಗೇರಿಯಲ್ಲಿ ಚಾಲಕರ ಸಂಘ ಆರಂಭ

ಶೃಂಗೇರಿ: ಇಲ್ಲಿ ಇತ್ತೀಚೆಗೆ ಆರಂಭವಾದ ಚಾಲಕರ ಸಂಘಕ್ಕೆ ಪರ್ತಕರ್ತ ಕಲ್ಕುಳಿ ವಿಠಲ್ ಹೆಗ್ಡೆಯವರನ್ನು ಅಧ್ಯಕ್ಷರಾಗಿ ಆಯ್ಕೆ ಮಾಡಲಾಗಿದೆ. ಇತರ ಪದಾಧಿಕಾರಿಗಳು: ನಜೀರ್ ಖಾನ್, ನಾಗೇಂದ್ರ ಎಸ್. (ಉಪಾಧ್ಯಕ್ಷರು); ಜಿ. ಆರ್. ಶಿವಪ್ಪ, (ಕಾರ್ಯದರ್ಶಿ); ಎಸ್ ಪಿ. ಸೋಮಶೇಖರ್ (ಸಹ ಕಾರ್ಯದರ್ಶಿ); ಬಿ. ಕೆ. ಬಸವರಾಜ್ (ಖಜಾಂಚಿ) ಹಾಗೂ ಸಲಹೆಗಾರರಾಗಿ ಟಿ. ಪಿ. ಗೋವರ್ಧನ ನಾಯಕ್.

ಕಾರ್ಯಕಾರಿ ಮಂಡಳಿ: ಬಿ.ಆರ್. ಸುಧಾಕರ್, ಟಿ ಕೃಷ್ಣಶೆಟ್ಟಿ, ಅಬ್ದುಲ್ ಖಾದರ್, ಕೆ.ಎಸ್.ದುಷ್ಯಂತ, ಉಲ್ಲಾಸ್ ಕಾಮತ್, ಜಿ.ಆರ್. ಸುಬ್ರಾಯ ನಾಯ್ಕ, ಜಿ. ಅಣ್ಣಪ್ಪ, ಸುಬ್ರಮಣ್ಯ ಉಪಾಧ್ಯ, ಎ. ಭಾಸ್ಕರ್ ಎಂ.ಎ. ಶ್ರೀಧರ್ ಭಟ್ಟ ಮತ್ತು ಎಸ್. ಕೆ. ಸೀತಾರಾಮ.

ಕಾಚಕಲ್ ಸೇತುವೆಗೆ ಸಿಮೆಂಟ್ ಕೊರತೆ

ಕೊಪ್ಪ: ಇಲ್ಲಿಂದ ಕಾಚಕಲ್ಲಿಗೆ ಹೋಗುವ ರಸ್ತೆಯಲ್ಲಿ ನಿರ್ಮಾಣವಾಗುತ್ತಿರುವ ಸೇತುವೆ ಸಿಮೆಂಟ್ ಅಭಾವದಿಂದಾಗಿ ಈ ಮಳೆಗಾಲದೊಳಗೆ ಮುಗಿಯುವ ಸಂಭವವಿಲ್ಲವೆಂದು ತಿಳಿದು ಬಂದಿದೆ.

ಸೇತುವೆಯ ಕಂಬಗಳ ನಿರ್ಮಾಣ ಈಗಾಗಲೇ ಆಗಿದ್ದು, ಇನ್ನು 200 ಮೂಟೆ ಸಿಮೆಂಟ್ ಇದ್ದಲ್ಲಿ ಒಂದು ತಿಂಗಳೊಳಗೆ ಸೇತುವೆ ಪೂರ್ಣವಾಗಿ ಸಂಚಾರಕ್ಕೆ ಸಿದ್ಧವಾಗುವುದೆನ್ನಲಾಗಿದೆ.

ಆದರೆ ಸರ್ಕಾರದ ಆರ್ಥಿಕ ಅಡಚಣೆ ಮತ್ತು ಸಿಮೆಂಟ್ ಪೂರೈಕೆಯ ಕೊರತೆಯಿಂದಾಗಿ ಈ ಕೆಲಸ ನಿಲ್ಲುವ ಸಂಭವವಿದ್ದು. ಹೀಗಾದಲ್ಲಿ ಮಳೆಗಾಲ ಪೂರ್ತಿ ಕಾಚಕಲ್ ಕಡೆಯ ಎಲ್ಲಾ ಹಳ್ಳಿಗಳೂ ಸಂಪೂರ್ಣವಾಗಿ ಸಂಪರ್ಕಕಡಿದು ಕೊಳ್ಳಲಿವೆ. ಸೇತುವೆಗಾಗಿ ಈಗಾಗಲೇ ಹಿಂದಿದ್ದ ರಸ್ತೆಯನ್ನು ಸಹ ಕಡಿದಿರುವುದರಿಂದ ಈ ತೊಂದರೆ ಹಿಂದೆಂದಿಗಿಂತ ಈಗಮತ್ತಷ್ಟು ಹೆಚ್ಚಾಗಲಿದೆ.

ಇದನ್ನು ಗಮನಿಸಿ ಶಾಸಕರು, ಹಿರಿಯ ಅಧಿಕಾರಿಗಳು ಸೇತುವೆ ಪೂರ್ಣಗೊಳ್ಳುವಂತೆ ಕೂಡಲೇ ಏರ್ಪಾಡು ಮಾಡಬೇಕೆಂದು ರೈತರು ಒತ್ತಾಯಿಸಿದ್ದಾರೆ.

ತಿದ್ದುಪಡಿ

ಶೃಂಗೇರಿ ತಾ॥ ನೆಮ್ಮಾರು ಮಂಡಲದ ಎಲ್ಲಾ ಸ್ಥಾನಗಳೂ ಜನತಾಕ್ಕೆ ಲಭಿಸಿವೆ. ಒಂದು ಮಂಡಲದ ಎಲ್ಲಾ ಸ್ಥಾನಗಳೂ ಒಂದೇ ಪಕ್ಷಕ್ಕೆ ಬಂದಿರುವುದು ರಾಜ್ಯದಲ್ಲಿ ಇದೊಂದೇ ಎಂದು ಕಚ್ಚೋಡಿ ಶ್ರೀನಿವಾಸ್ ತಿಳಿಸಿದ್ದಾರೆ. (ನಮ್ಮ ಹಿಂದಿನ ವರದಿಯಲ್ಲಿ ಒಂದು ಸ್ಥಾನ ಕಾಂಗ್ರೆಗೆ ಎಂದು ಪ್ರಕಟವಾಗಿತ್ತು.)

(ಆದರೆ ಈ ಹೇಳಿಕೆ ಒಂದು ವೇಳೆ ನಿಜವಿದ್ದರೂ ಸಹ ನೆಮ್ಮಾರಿನ ಈ 'ಸಾಧನೆ' ಪೂರ್ತಿ ಕಳಂಕ ರಹಿತ ಎನ್ನುವಂತಿಲ್ಲ. ಅಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿ ಗೆದ್ದ ಒಬ್ಬ ಸದಸ್ಯರನ್ನು ಅನಂತರ ಜನತಾ ಪಕ್ಷ ತನ್ನ ತೆಕ್ಕೆಗೆ ತೆಗೆದುಕೊಂಡಿದೆ.)

ಬಪ್ಪುಂಜಿ ಶಾಲೆಗೆ ಸತತ 2ನೇ ಬಾರಿ ಪ್ರಶಸ್ತಿ

ಕೊಪ್ಪ: ಅಂದಗಾರಿನಲ್ಲಿ ನಡೆದ ತಾ॥ ಶಾಲಾಭಿವೃದ್ಧಿ ಸಮಿತಿಗಳ ಮತ್ತು ಶಿಕ್ಷಕರ ಸಮ್ಮೇಳನದಲ್ಲಿ ಬಪ್ಪುಂಜಿಯ ಹಿರಿಯ ಪ್ರಾಥಮಿಕ ಶಾಲೆ ಸತತ 2ನೇ ಬಾರಿಗೆ ಪ್ರಶಸ್ತಿ ಮತ್ತು ಪರ್ಯಾಯ ಫಲಕವನ್ನು ಪಡೆಯಿತು.

ಕಡ್ಡಾಯ ಪ್ರಾಥಮಿಕ ಶಿಕ್ಷಣ ಜಾರಿಯಾದಂದಿನಿಂದ ಕೊಪ್ಪ ತಾ॥ನಲ್ಲಿ ಹೀಗೆ ಸತತವಾಗಿ 2ನೇ ಬಾರಿ ಪ್ರಶಸ್ತಿ ಪಡೆ ರುವ ಶಾಲೆ ಇದೊಂದೇ ಎನ್ನಲಾಗಿದೆ.

ಶಿಕ್ಷಕರಿಗೆ ಪ್ರಶಸ್ತಿ

ಕೊಪ್ಪ ಟೌನ್ ಶಾಲೆ, ತನೂಡಿ, ಗಣಪತಿ ಕಟ್ಟೆ, ಕೌಸಹಳ್ಳಿ ಮತ್ತು ಕಲ್ಲುಗುಡ್ಡೆ ಶಾಲೆಗಳ ಮುಖ್ಯೋಪಾಧ್ಯಾಯರುಗಳಿಗೆ ಉತ್ತಮ ಕೆಲಸಕ್ಕಾಗಿ ಪ್ರಶಸ್ತಿಗಳನ್ನು ನೀಡಲಾಯಿತು.

ಕೆ. ವಸಂತ ಅಜಿಲರು ಈ ಪ್ರಶಸ್ತಿಗಳನ್ನು ವಿತರಣೆ ಮಾಡಿದರು.

ರಾಜ್ಯ ಮಟ್ಟದ ಕೆಸರು ಗದ್ದೆ ಓಟ

ಕೊಪ್ಪ: ಇಲ್ಲಿನ ಬಾಳಗಡಿಯ ಸರ್ವೋದಯ ಯುವಕ ಸಂಘ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ 26–4–1987 ನೇ ಭಾನುವಾರ ಬಾಳಗಡಿಯಲ್ಲಿ ರಾಜ್ಯ ಮಟ್ಟದ ಕೆಸರು ಗದ್ದೆ ಓಟ ಮತ್ತು ಹಗ್ಗ ಎಳೆಯುವ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಹಗ್ಗ ಎಳೆಯುವ ಸ್ಪರ್ಧೆಯಲ್ಲಿ ಒಂದು ತಂಡದಲ್ಲಿ 8 ಮಂದಿಗೆ ಅವಕಾಶವಿದೆ. ಈ ಸ್ಪರ್ಧೆಗೆ 10 ರೂ., ಕೆಸರು ಗದ್ದೆ ಓಟಕ್ಕೆ 3 ರೂ. ಪ್ರವೇಶಧನ. ಆಸಕ್ತ ಯುವಕ–ಯುವತಿಯರು ಪ್ರವೇಶ ಪತ್ರಗಳನ್ನು 24–4–1987 ರೊಳಗೆ ಸಂಘದ ಅಧ್ಯಕ್ಷರಿಗೆ ಅಥವಾ ಕೊಪ್ಪದ ಯುವಕ ಕೇಂದ್ರಕ್ಕೆ ತಲುಪಿಸಬೇಕು

ನ. ರಾ. ಪುರ: ಸೊಗಸಾದ ಕಾರ್ಯಕ್ರಮಗಳ ರಾಮೋತ್ಸವ

ನ. ರಾ. ಪುರ: ಇಲ್ಲಿ ಏಳು ದಿನ ನಡೆದ ರಾಮೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮಗಳು ಸೊಗಸಾಗಿಯೂ ಬೋಧಪ್ರದವಾಗಿಯೂ ಇದ್ದವು.

ರಾಣೆಬೆನ್ನೂರಿನ ರಾಜ್ಯ ಪ್ರಶಸ್ತಿ ವಿಜೇತ ನಾರಣಪ್ಪನವರ ಸೂತ್ರದ ಗೊಂಬೆ ಆಟ ಮತ್ತು ಶಿವಮೊಗ್ಗ ಜಿಲ್ಲೆ ಹೊಸಹಳ್ಳಿಯ ಗಮಕ ವಿದ್ವಾನ್ ಎಚ್. ಆರ್. ಕೇಶವ ಮೂರ್ತಿಯವರ ವಾಚನಕ್ಕೆ ರಾಜಾರಾಮ ಮೂರ್ತಿಯವರ ವ್ಯಾಖ್ಯಾನ ವಿಶೇಷವಾದ ಕಾರ್ಯಕ್ರಮಗಳು.

ರಾಮಾಯಣದ ಪಾಠವನ್ನು ಉಪಾಧ್ಯಾಯರೊಬ್ಬರು ಎಳೆಯ ಮಕ್ಕಳಿಗೆ ದಿನವೂ ಬೋಧಿಸಿ ಕೊನೆಯ ದಿನ ಈ ಪಾಠಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಿ ಅದರಲ್ಲಿ ವಿಜೇತರಾದವರಿಗೆ ಬಹುಮಾನ ಕೊಡುವ ಪ್ರಾಯೋಗಿಕ ಕಾರ್ಯಕ್ರಮವೊಂದನ್ನು ಈ ಸಾರಿ ವಿಶೇಷವಾಗಿ ಏರ್ಪಡಿಸಲಾಗಿತ್ತು. ರಾಮೋತ್ಸವ ಸಮಿತಿಯ ಸದಸ್ಯರಲ್ಲೊಬ್ಬರಾದ ಸತ್ಯಪ್ರಕಾಶರವರು ಇದನ್ನು ನಡೆಸಿಕೊಟ್ಟರು.

(ವರದಿ: ಎಸ್.ಎ. ಮಹಾಬಲರಾವ್)

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು: ದೀವಟಿಗೆ ಅಚ್ಚು ಕೂಟ, ಕೊಪ್ಪ.